**ಸಾಕ್ಷಿಯನ್ನು ದಿನಾಂಕ 12-11-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ 1 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಎಸ್.ಎಸ್.ರಿಂದ**

ನಾನು ರೋಮನ್ ಕೆಥೋಲಿಕ್ ಕ್ರಿಶ್ಚಿಯನ್. ವಾದಿ ಪ್ರತಿವಾದಿಯರೂ ಸಹ ರೋಮನ್ ಕೆಥೋಲಿಕ್ ಕ್ರಿಶ್ಚಿಯನ್. ನನ್ನ ತಂದೆ, ತಾತ ಮತ್ತು ಮುತ್ತಾತನ ತಲೆಮಾರಿನಿಂದಲೂ ರೋಮನ್ ಕೆಥೋಲಿಕ್ ಕ್ರಿಶ್ಚಿಯನ್ನರು ಎಂದರೆ ಸರಿ. ಆಸ್ತಿ ವಿಚಾರಗಳಲ್ಲಿ ಮತ್ತು ನಮ್ಮ ದಿನನಿತ್ಯದ ಜೀವನದ ಎಲ್ಲಾ ಚಟುವಟಿಕೆಗಳಲ್ಲಿ ಕ್ರಿಶ್ಚಿಯನ್ ನಿಯಮವನ್ನೇ ಪಾಲಿಸುತ್ತಿದ್ದೇವೆ ಎಂದರೆ ಸರಿ.

ಪಿಡಬ್ಲು-1

ಪಾಸ್ಕು ಡಯಾಸ್ ರವರ ಮಗಳು ಕತರ್ನಿ ಮೃತಪಟ್ಟಿದ್ದಾರೆ. ಆಕೆಗೆ 3 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ಮುಂತಿ ಎಂಬ ಮಗಳು, ಜಾನ್ ಹಾಗೂ ದಿಲೀಪ್ ಎಂಬ ಎರಡು ಜನ ಗಂಡುಮಕ್ಕಳು ಎಂದರೆ ಸರಿ. ಈ ಪ್ರಕರಣದಲ್ಲಿ ಮುಂತಿ, ದಿಲೀಪ್ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪಾಸ್ಕು ಇಂತ್ರು ಡಯಾಸ್ ರವರಿಗೆ ಇಂತ್ರು ಎಂಬ ಒಬ್ಬ ಮಗನಿದ್ದು ಆತ ಮೃತಪಟ್ಟಿದ್ದಾನೆ. ಸದರಿ ಇಂತ್ರುಗೆ ಆಶಿಸ್, ಶೆಲಿನಾ ಮತ್ತು ರುಬಿ ಎಂಬ ಹೆಣ್ಣು ಮಕ್ಕಳು ಹಾಗೂ ಜಾನ್ಸನ್ ಎಂಬ ಒಬ್ಬ ಮಗ ಇದ್ದಾನೆ ಎಂದರೆ ಸರಿ. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2 ಮತ್ತು 7 ನೇ ಪ್ರತಿವಾದಿಯರು ತಮ್ಮ ಭಾಗದ ಹಿಸ್ಸಾ ಸ್ವತ್ತನ್ನು ರಮಾನಂದ ಗಣಪತಿ ನಾಯ್ಕ ಎಂಬುವವರಿಗೆ ನೊಂದಾಯಿತ ಕ್ರಯಪತ್ರದ ರೀತ್ಯಾ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈ ವಿಚಾರ ನನಗೆ ಗೊತ್ತು. ಸದರಿ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

ನಾನು 10 ನೇ ತಿಂಗಳು 1969 ನೇ ಇಸವಿಯಲ್ಲಿ ಹುಟ್ಟಿದ್ದೇನೆ. ದಿನಾಂಕ 25 ನೇ ತಾರೀಕು ಇರಬಹುದು, ಸರಿಯಾಗಿ ನೆನಪಿಲ್ಲ. ನನ್ನ ಪ್ರಮಾಣಪತ್ರದಲ್ಲಿ ತೋರಿಸಿರುವ ವಯಸ್ಸು ಸರಿ ಇರುತ್ತದೆ. 1 ಮತ್ತು 2 ನೇ ವಾದಿಯರು ಜೀವಂತವಾಗಿದ್ದಾರೆ. ನನಗಿಂತಲೂ ಹೆಚ್ಚು ಮಾಹಿತಿ ಅವರಿಗೆ ಇದೆ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ವಿಚಾರಣೆ ಮಾಡುವುದಿಲ್ಲ, ಅವರಿಗೆ ಹೆಚ್ಚು ವಯಸ್ಸಾಗಿದ್ದು ನಡೆಯಲು ಮಾತನಾಡಲು ಆಗುವುದಿಲ್ಲ ಎನ್ನುತ್ತಾರೆ. ನನ್ನ ತಂದೆ ರುಜಾರ್ ಡಯಾಸ್‌ರವರಿಗೆ ನನ್ನ ತಾಯಿ ಆನಾ ಒಬ್ಬಳೇ ಹೆಂಡತಿ ಎಂದರೆ ಸರಿ. ನನ್ನ ತಾಯಿ 5 ನೇ ವಾದಿಯ ಜೊತೆ ಮಂಕಿಯಲ್ಲಿ ವಾಸವಾಗಿದ್ದಾರೆ. 4, 6 ಮತ್ತು 7 ನೇ ವಾದಿ ಗೋವಾದಲ್ಲಿ ಕೂಲಿ ಕೆಲಸ ಮಾಡುತ್ತಾರೆ. 4, 6 ಮತ್ತು 7 ನೇ ವಾದಿ ಗೋವಾದಲ್ಲಿ ವಾಸವಾಗಿದ್ದರೂ ಉದ್ದೇಶಪೂರ್ವಕವಾಗಿ ಅಳ್ವಂಕಿಯಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ಮತ್ತು ದಾವೆಯಲ್ಲಿ ಅದನ್ನೇ ಬರೆದಿದ್ದೇನೆ. 2, 3 ಮತ್ತು 6 ಮತ್ತು 7 ನೇ ವಾದಿಯರೂ ಸಹ ಕೂಲಿ ಕೆಲಸ ಮಾಡುತ್ತಾರೆ. 4 ಮತ್ತು 5 ನೇ ವಾದಿಯರು ಮನೆಕೆಲಸ ಮಾಡುತ್ತಾರೆ ಅಂತ ವಾದ ಪತ್ರದಲ್ಲಿ ತೋರಿಸಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಯಾವತ್ತೂ ವ್ಯವಸಾಯ ಮಾಡಿಲ್ಲವಾದ್ದರಿಂದಲೇ ವಾದ ಪತ್ರದಲ್ಲಿ ನನ್ನ ಉದ್ಯೋಗ ವ್ಯವಸಾಯ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. 1 ರಿಂದ 15 ನೇ ಪ್ರತಿವಾದಿಯರು ಮಾತ್ರವೇ ದಾವಾ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದಾರೆ, ನಾವು ಯಾವತ್ತೂ ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾವು ಉಳುಮೆ ಮಾಡುತ್ತಿರುವುದನ್ನು ತೋರಿಸಲು ಯಾವುದೇ ದಾಖಲೆ ಇಲ್ಲ. ದಾವಾ ಸ್ವತ್ತುಗಳಿಗೆ ಭೂಕಂದಾಯವನ್ನು (ತೀರ್ವೆ) ನಾನು ಕಟ್ಟಿಲ್ಲ, ನಮ್ಮ ದೊಡ್ಡಪ್ಪ ಕಟ್ಟುತ್ತಾರೆ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿ ಇಲ್ಲವಾದ್ದರಿಂದಲೇ ಯಾವುದೇ ಕಂದಾಯವನ್ನು ಈ ವರೆಗೆ ಕಟ್ಟಿಲ್ಲ ಎಂದರೆ ಸರಿಯಲ್ಲ.

ಫಾಸ್ಕು ಇಂತ್ರು ಡಯಾಸ್ ಒಬ್ಬರೇ ಭೂನ್ಯಾಯ ಮಂಡಳಿಗೆ ಫಾರಂ ನಂ.7 ನ್ನು ನೀಡಿರುತ್ತಾರೆ ಎಂದರೆ ಆತ ಮತ್ತು ರುಜಾರ್ ಇಬ್ಬರೂ ಸೇರಿ ಕೊಟ್ಟಿದ್ದಾರೆ ಎನ್ನುತ್ತಾರೆ. ನಾನು ಮತ್ತು ಇತರೇ

ವಾದಿಯರು ಫಾರಂ ನಂ.7 ನ್ನು ತುಂಬಿಕೊಟ್ಟಿಲ್ಲ ಎಂದರೆ ಸರಿ. ಫಾಸ್ಕು ಇಂತ್ರು ಡಯಾಸ್ ತಾನು ವೈಯಕ್ತಿಕವಾಗಿ ಸಾಗುವಳಿ ಮಾಡುತ್ತಿದ್ದು ತನ್ನ ವೈಯಕ್ತಿಕನಾತೆಯಿಂದಲೇ ಫಾರಂ ನಂ.7 ನ್ನು ಭೂನ್ಯಾಯ ಮಂಡಳಿಗೆ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ಕುಟುಂಬದ ಪರವಾಗಿ ಫಾರಂ ನಂ.7 ನ್ನು ಭೂನ್ಯಾಯ ಮಂಡಳಿಗೆ ಸಲ್ಲಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಾಸ್ಕು ಡಯಾಸ್‌ರವರನ್ನು ಸಂರಕ್ಷಿತ ರೈತ ಎಂದು ದಾಖಲು ಮಾಡಲಾಗಿತ್ತು ಎಂದರೆ ಸರಿ. ಫಾರಂ ನಂ.10 ನ್ನು ಭೂನ್ಯಾಯ ಮಂಡಳಿಯು ಫಾಸ್ಕು ಡಯಾಸ್ ರವರ ಹೆಸರಿನಲ್ಲಿ ನೀಡಲಾಗಿತ್ತು ಎಂದರೆ ಸರಿ. ಫಾಸ್ಕು ಡಯಾಸ್ ರವರ ಹೆಸರಿನಲ್ಲಿ ಫಾರಂ ನಂ.10 ನ್ನು ನೀಡಿರುವುದು ತಪ್ಪು ಎಂದು ಯಾವುದೇ ಅಪೀಲು ಸಲ್ಲಿಸಿಲ್ಲ. ಆದರೆ ಈ ಬಗ್ಗೆ ಆತನನ್ನು ಕೇಳಿದಾಗ ಆತ ನಿಮಗೂ ಮಾಡಿಕೊಡುತ್ತೇನೆ ಎಂದು ಹೇಳುತ್ತಲೇ ಇದ್ದರು ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲವಾದ್ದರಿಂದಲೇ ನಾವು ಆತನನ್ನು ಕೇಳಲಿಲ್ಲ ಮತ್ತು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

1962 ರಲ್ಲಿ ಫಾಸ್ಕು ಡಯಾಸ್ ಹೆರಂಗಡಿಯನ್ನು ಬಿಟ್ಟು ಬೇರೆ ಕಡೆ ಕೆಲಸಕ್ಕೆ ಹೋಗಿದ್ದರು ಎಂದರೆ ಸರಿಯಲ್ಲ. ತದನಂತರದಲ್ಲಿ ಆತನ ಮೊದಲನೇ ಹೆಂಡತಿ ಆಶಿಸ್ ರವರನ್ನು ರೈತ ಅಂತ ನಮೂದು ಮಾಡಲಾಗಿದೆ ಎಂದರೆ ಅವರು ಆ ರೀತಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಫಾಸ್ಕು ಯಾವಾಗ ಮೃತಪಟ್ಟಿದ್ದಾರೆ ನನಗೆ ಗೊತ್ತಿಲ್ಲ. ಆತ ದಿನಾಂಕ 12-01-1995 ರಂದು ಮೃತಪಟ್ಟಿದ್ದಾರೆ ಎಂದರೆ ಇರಬಹುದು. ಫಾಸ್ಕು ಮೃತಪಟ್ಟ ನಂತರ 1 ರಿಂದ 15 ನೇ ಪ್ರತಿವಾದಿಯರ ಹೆಸರು ದಾವಾ ಸ್ವತ್ತುಗಳ ಉತಾರಿನಲ್ಲಿ ದಾಖಲಾಗಿದೆ ಎಂದರೆ ಸರಿ. ಇವತ್ತಿಗೂ ಎಲ್ಲಾ ಕಂದಾಯ ದಾಖಲೆಗಳಲ್ಲಿ 1 ರಿಂದ 15 ನೇ ಪ್ರತಿವಾದಿಗಳ ಹೆಸರು ಇದೆ ಎಂದರೆ ಸರಿ. ಇಂತ್ರು ಡಯಾಸ್ ಮತ್ತು ಅವರ ಹೆಂಡತಿ ಆಂತ್ರಿಕ್ ಯಾವಾಗ ತೀರಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಅವರಿಬ್ಬರಲ್ಲಿ ಯಾರು ಮೊದಲು ಮೃತಪಟ್ಟಿದ್ದಾರೆ ನನಗೆ ಗೊತ್ತಿಲ್ಲ. ಫಾಸ್ಕು ಡಯಾಸ್ ಮೃತಪಟ್ಟಾಗ ನಮ್ಮ ತಂದೆ ರುಜಾರ್ ಜೀವಂತ ಇದ್ದರು. 1 ರಿಂದ 15 ನೇ ಪ್ರತಿವಾದಿಯರ ಹೆಸರಿಗೆ ಮ್ಯುಟೇಶನ್ ಆಗಿರುವ ವಿಚಾರ ನನಗೆ ಗೊತ್ತಿರಲಿಲ್ಲ. 1 ರಿಂದ 15 ನೇ ಪ್ರತಿವಾದಿಯರ ಹೆಸರಿಗೆ ಮ್ಯುಟೇಶನ್ ಆದಾಗ ನಮ್ಮ ತಂದೆ ಮತ್ತು ಅವರ ಸಹೋದರಿ ನತಾಲ್ ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ತಕರಾರು ಸಲ್ಲಿಸಿದ್ದರಿಂದ ಮಾವಿನಕುರ್ವೆ ನಾಡ ಕಚೇರಿಯಲ್ಲಿ ವಿವಾದ ಪ್ರಕರಣ ದಾಖಲಾಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಆರ್.ಆರ್.ಟಿ. ವಿವಾದ ಪ್ರಕರಣದ ವಿಚಾರಣೆ ನಡೆದು ನಮ್ಮ ತಂದೆಯವರು ಸಲ್ಲಿಸಿದ್ದ ತಕರಾರನ್ನು ಕಿತ್ತು ಹಾಕಿ ದಿನಾಂಕ 20-08-1996 ರಲ್ಲಿ ಆದೇಶ ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ಆದೇಶ ಆಗಿರುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ದಿನಾಂಕ 20-08-1996 ರ ಆದೇಶವನ್ನು ತೋರಿಸಲಾಗಿ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆದೇಶದ ವಿರುದ್ಧ ನೀವಾಗಲೀ ನಿಮ್ಮ ತಂದೆಯವರಾಗಲೀ ಯಾವುದಾದರೂ ಅಪೀಲು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಮ್ಮ ತಂದೆಯವರು ಸದರಿ ಆದೇಶದ ಅನ್ವಯ ಸಿವಿಲ್ ಕೋರ್ಟಿನಲ್ಲಿ ಯಾವುದೇ ದಾವೆ ಸಲ್ಲಿಸಿಲ್ಲ. ದಾವಾ ಸ್ವತ್ತುಗಳು ಪಾಸ್ಕೋ ರವರ

ವೈಯಕ್ತಿಕ ಆಸ್ತಿಯಾಗಿದ್ದರಿಂದಲೇ ಯಾವುದೇ ಅಪೀಲು ಸಲ್ಲಿಸಿಲ್ಲ ಮತ್ತು ದಾವೆ ಮಾಡಿಲ್ಲ ಎಂದರೆ ಸರಿಯಲ್ಲ.

1 ರಿಂದ 15 ನೇ ಪ್ರತಿವಾದಿಯರು ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಿಭಾಗ ಪತ್ರ ನೊಂದಾಯಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಪತ್ರದಂತೆ ದಾವಾ ಸ್ವತ್ತುಗಳು ಪೋಡಿ ಹಿಸ್ಸಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ನಕಾಶೆ ಕೂಡ ತಯಾರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಇಂತ್ರು ಡಯಾಸ್ ಯಾವತ್ತಿಗೂ ಸಂರಕ್ಷಿತ ರೈತ ಇರಲಿಲ್ಲ ಎಂದರೆ ಸರಿಯಲ್ಲ. ಪಾಸ್ಕೋ ತನ್ನ ವೈಯಕ್ತಿಕ ನಾತೆಯಿಂದ ದಾವಾ ಸ್ವತ್ತುಗಳನ್ನು ಗೇಣಿಗೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಪಾಸ್ಕೋ ಡಯಾಸ್ 1944 ರಿಂದ ಸಂರಕ್ಷಿತ ರೈತನಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮಗೆ 1/5 ಹಿಸ್ಸಾ ಹಕ್ಕು ದಾವಾ ಸ್ವತ್ತುಗಳ ಮೇಲೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- 8 ರಿಂದ 15 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**